ಭಾರವಾದ ರೆಡ್ ಕಾರ್ಪೆಟ್ ಹೊತ್ತು ತಂದು ಹಾಸಿದಳು, ಡಿಜೇ ಹುಡುಗ ಜೋರಾಗಿ ಹಾಡು ಹಾಕಿದ. ಅತಿಥಿಗಳು ಒಬ್ಬೊಬ್ಬರಾಗಿ ಬರತೊಡಗಿದರು.

ಪರಮೇಶ್ವರನಿಗೆ ಸುಜಾತಾಳ ಪರಿಚಯವಾಗಿದ್ದು ಇಂತಹದ್ದೇ ಯಾವುದೋ ಮದುವೆ ಸಮಾರಂಭದಲ್ಲಿ, ಸುಮಾರು 2 ವರ್ಷಗಳ ಹಿಂದೆ. ಅವನಿಗೆ ಡೆಕೊರೇಶನ್ ಕಂಪೆನಿಯಲ್ಲಿ ಕೆಲಸವಾದರೆ ಅವಳಿಗೆ ಸಮಾರಂಭಗಳಿಗೆ ಕುರ್ಚಿ, ಟೇಬಲ್ಲು, ಪಾತ್ರೆ ಸಪ್ಲೈ ಮಾಡುವ ಕಂಟ್ರ್ಯಾಕ್ಟರ್ ವೆಂಕಟಾಪತಿಯಲ್ಲಿ ಕೆಲಸ. ಹಾಗೆ ನೋಡಿದರೆ ಸಾಕಷ್ಟು ಮದುವೆಗಳಲ್ಲಿ ಇವರಿಬ್ಬರ ಕೈವಾಡವಿತ್ತು, ಇಬ್ಬರೂ ಸೇರಿ ಸಾಕಷ್ಟು ಮದುವೆಗೆ ಅಲಂಕರಿಸಿದ್ದರು. ಸುಜಾತ ನಿರಕ್ಷರ ಕುಕ್ಷಿಯಲ್ಲ, 10ನೇ ಕ್ಲಾಸ್ ಪಾಸು ಮಾಡಿದವಳು. ಹಳ್ಳಿಯಲ್ಲ ಎನ್ನುವಷ್ಟು ದೊಡ್ಡ ಊರಿನಲ್ಲಿದ್ದಳು. ಮನೆಯ ಆರ್ಥಿಕ ಪರಿಸ್ಥಿತಿಯಿಂದಾಗಿ ಕಾಲೇಜಿಗೆ ಹೋಗದಿರಲು ನಿಶ್ಚಯಿಸಿ ಕೆಲಸ ಹುಡುಕತೊಡಗಿದಳು. ಮೊದಲ ಸುತ್ತಿನಲ್ಲಿ ಅತ್ಯಂತ ಉತ್ಸಾಹದಿಂದ ಬ್ಯಾಂಕಿಗೆ, ಫೈನಾನ್ಸ್ ಕಂಪೆನಿಗೆ, ಆಫೀಸಿಗೆ ಅಟೆಂಡರ್ ಕೆಲಸಕ್ಕೆ ಅರ್ಜಿ ಸಲ್ಲಿಸಿದಳು, ನಾಲ್ಕನೆಯ ದರ್ಜೆಯ ಅಟೆಂಡರ್ ಕೆಲಸವೂ ಕೈಗೆಟುಕೊಲ್ಲ ಎಂದು ತಿಳಿಯಲು ಆರೇಳು ತಿಂಗಳು ಬೇಕಾಯಿತು. ಬಟ್ಟೆ, ಬಳೆ, ಪಾತ್ರೆಯಂಗಡಿಯಲ್ಲಿ ಸೇಲ್ಸ್ ಗರ್ಲ್ ಬೇಕಾಗಿದ್ದಾರೆ ಎನ್ನುವ ಬೋರ್ಡ್ ಕಾಣಿಸತೊಡಗಿತು, ಮರ್ಯಾದೆಯಿಂದ ಮಾಡುವ ಯಾವ ಕೆಲಸವೂ ಸಣ್ಣದಲ್ಲ ಎಂದುಕೊಂಡು ಅದನ್ನೂ ವಿಚಾರಿಸಿದಳು. ಸುಲಭದಲ್ಲಿ ಸಿಗುವ ಸೇಲ್ಸ್ ಗರ್ಲ್ ಕೆಲಸಕ್ಕೆ ಅಡ್ಡ ಬಂದಿದ್ದು ಅವಳ ಹೈಟು, ಹುಡುಗರು ಕರುಬುವಷ್ಟು ಎತ್ತರ ಅವಳದ್ದು. ಅಂದರೆ 6 ಅಡಿ ಒಂದಿಂಚು ಉದ್ದ, ಅಲ್ಲದೆ ಮುಖದ ತುಂಬಾ ಒಂದಕ್ಕೊಂದು ಮೀರಿ ಬೆಳೆದಿರುವ ಮೊಡವೆಗಳು. ಸಾಧಾರಣ ಹುಡುಗಿಯರಿಗಿಂತ ವಿಪರೀತವಾಗಿ ಕಾಣುವ ಅವಳನ್ನು ಸೇಲ್ಸ್ ಗರ್ಲ್ ಕೆಲಸ ಕೊಡಲೂ ಅಂಗಡಿಯವರು ಹಿಂದೆ ಮುಂದೆ ನೋಡಿದರು. ಕೆಲಸವಿಲ್ಲದೆ ಮನೆಯಲ್ಲಿ ಹೊರೆಯಾಗಿ ಕೂತಾಗಲೇ ಸೋದರ ಮಾವ ಗಣಪತಿ ಪ್ರತ್ಯಕ್ಷವಾದದ್ದು, ಸೋದರ ಸೊಸೆಗೆ ಕೆಲಸ ಕೊಡಿಸುತ್ತೇನೆಂದು ಬೆಂಗಳೂರಿಗೆ ಕರೆದ. ಅವಳಿಗೂ ಊರು ಬಿಟ್ಟರೆ ಸಾಕಿತ್ತು, ಕೆಲಸವೊಂದು ಬೇಕಿತ್ತು. ಬೆಂಗಳೂರಿಗೆ ಬಲಗಾಲಿಟ್ಟು ಬಂದಳು. ತನ್ನ ಗಂಡನ ಹಿಂದೆ ಉದ್ದ ಕೋಲಿನಂತೆ ನಡೆದು ಬಂದವಳನ್ನು ಕಂಡು ಅವಳತ್ತೆ ಬೆಚ್ಚಿ ಬಿದ್ದರು. ಗಂಡನನ್ನು ಬದಿಗೆ ಕರೆದು, 'ಎರಡು ಕೋಣೆಯ ಈ ಮನೆಯಲ್ಲಿ ನಾವು ನಾಲ್ಕು ಜನರಿಗೇ ಜಾಗ ಸಾಕಾಗೋಲ್ಲ, ಮಾಡಿದ ಅನ್ನ ಅಲ್ಲಿಂದಲ್ಲಿಗೆ, ನೀವು ಸಂಪಾದಿಸಿ ತರುವುದು ಅಷ್ಟರಲ್ಲೇ ಇದೆ, ದೊಡ್ಡ ಪರ್ಸಿನಲ್ಲಿ 100 ರೂಪಾಯಿಯೂ ಇಲ್ಲ, ಈ ಆರು ಕೋಲಿನವಳನ್ನು ಕೂರಿಸುವುದೆಲ್ಲಿ? ಬಡಿಸುವುದೇನು?' ಎಂದು ಗುಡುಗುಟ್ಟಿದಳು. 'ಅಲ್ವೇ ನಿನ್ನ ಗಂಡ ಯಾವತ್ತೂ ತಲೆ ಇಲ್ಲದ ಕೆಲಸ ಮಾಡಿದವನಲ್ಲ, ರೂಪ ಹೇಗಿದ್ದರೇನು ಗಟ್ಟಿಮುಟ್ಟಾಗಿದ್ದಾಳೆ, ಇವಳನ್ನು ಯಾವುದಾದರೂ ಕೆಲಸಕ್ಕೆ ಸೇರಿಸಿದ್ರೆ ತಿಂಗಳಿಗೆ 10-12 ಸಾವಿರ ಗ್ಯಾರಂಟಿ. ಅವಳ ಕೈಗೆ ಬಂದದ್ದು ನನ್ನ ಪರ್ಸಿಗೆ ಬರಲು ಎಷ್ಟು ಹೊತ್ತು ಬೇಕು ಹೇಳು, ನೀನು ಅವಳ ಹತ್ತಿರ ದಂಡಿಯಾಗಿ ಕೆಲ್ಸ ಮಾಡ್ಸು, ಗಟ್ಟಿಮುಟ್ಟಾಗಿದ್ದಾಳೆ. ಅಲ್ದೇ ಇವಳು ಯಾರ ಹಿಂದೆಯಾದರೂ ಓಡಿ ಹೋಗುತ್ತಾಳೆಂಬ ತಲೆ ಬಿಸಿ ಬೇಡ' ಎಂದಾಗ ಅವಳತ್ತೆ ಗಂಡನ ಆಲೋಚನೆಯ ಜಾಡನ್ನು ಹಿಡಿದಳು.

ಮೊದಲು ಯಾವ್ಯಾವುದೋ ಕೆಲಸಕ್ಕೆ ಸೇರಿಸಿದ ಅವಳ ಮಾವ ಕಡೆಗೆ ಅವಳನ್ನು ವೆಂಕಟಾಪತಿಯಲ್ಲಿ ಕೆಲಸಕ್ಕೆ ಸೇರಿಸಿದ, ವೆಂಕಟಾಪತಿ ಸಮಾರಂಭಗಳಿಗೆ ಕುರ್ಚಿ, ಟೇಬಲ್, ಪಾತ್ರೆ ಸಪ್ಲೈ ಮಾಡುತ್ತಾನೆ. ಪ್ರತಿ ತಿಂಗಳು ತಿರುಪತಿ ತಿಮ್ಮಪ್ಪನ ದರ್ಶನ ಮಾಡುವ ವೆಂಕಟಾಪತಿ ಬಣ್ಣ ಕಳೆದುಕೊಂಡ ಪ್ಲಾಸ್ಟಿಕ್ ಕುರ್ಚಿ, ಸೊಟ್ಟಗಾದ ಟೇಬಲ್, ಕಿಲುಬಿದ ಪಾತ್ರೆಯನ್ನು ಮದುವೆಗಳಿಗೆ ಸಪ್ಲೈ ಮಾಡಿ ದುಡ್ಡಿನ ದೊಡ್ಡ ಗಂಟನ್ನೇ ಮಾಡಿಕೊಂಡಿದ್ದಾನೆ ಎನ್ನುತ್ತಾರೆ ಜನರು. ಭಾರವಾದ ಪಾತ್ರೆ, ಟೇಬಲ್ ಎತ್ತಿ ಇಡಲು ಹುಡುಗರನ್ನೇ ಆರಿಸಿಕೊಳ್ಳುವ ವೆಂಕಟಾಪತಿ ಅವಳನ್ನು ಕೆಲಸಕ್ಕೆ ತೆಗೆದುಕೊಳ್ಳಲು ಹಿಂದೆ ಮುಂದೆ ನೋಡಿದ, ಮಾವ ಗಣಪತಿ ಬಿಡಲಿಲ್ಲ. 'ಇವಳು ಯಾವ ಹುಡುಗರಿಗೂ ಕಡ್ಮೆ ಇಲ್ಲ, ಹಳ್ಳಿಯಿಂದ ಬಂದವಳು. ಹುಡುಗರಂತೆ ಬೀಡಿ, ಸಿಗರೇಟು ಎನ್ನುತ್ತಾ ಸಮಯ ಕಳೆಯುವುದೂ ಇಲ್ಲ' ಎಂದು ಒಪ್ಪಿಸಿದ. ಸುಜಾತ ಮಾವನ ಭರವಸೆಯನ್ನು ಹುಸಿಗೊಳಿಸಲಿಲ್ಲ, ಅವಳಿಗೆ ಸಿಗುತ್ತಿದ್ದ ಅರ್ಧ ಸಂಬಳ ಮಾವನ ಜೇಬು ತುಂಬುತ್ತಿತ್ತು. ಇದರಿಂದ ಅವಳಿಗೇನೂ ಬೇಸರವಿಲ್ಲ, ಪರಿಸ್ಥಿತಿಯನ್ನು